ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1423
2	ಸದಸ್ಯರ ಹೆಸರು	:	ಶ್ರೀ ಹೆಚ್.ಎಂ. ರಮೇಶ ಗೌಡ
3	ಉತ್ತರಿಸುವ ದಿನಾಂಕ	:	19-03-2020
4	ಉತ್ತರಿಸುವವರು	:	ಮುಖ್ಯಮಂತ್ರಿ

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರದಲ್ಲಿ ಖಾಲಿಯಿರುವ ನಿವೇಶನಗಳ ಸಂಖ್ಯೆ ಎಷ್ಟು; ಎಷ್ಟು ವರ್ಷದಿಂದ ಖಾಲಿ ಬಿದ್ದಿವೆ;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅಂದಾಜು 2,99,963 ಖಾಲಿ ನಿವೇಶನಗಳಿದ್ದು, ಬಹಳ ವರ್ಷಗಳಿಂದ ಖಾಲಿ ಇರುತ್ತದೆ.
ಆ)	ಸದರಿ ಖಾಲಿ ನಿವೇಶನಗಳಲ್ಲಿ ಸುತ್ತಮುತ್ತಲಿನ ಸಾರ್ವಜನಿಕರು ಕಸ ಮತ್ತು ಕವರ್ ಹಾಗೂ ಇನ್ನಿತರೆ ವಸ್ತುಗಳನ್ನು ಎಸೆದು ಪರಿಸರ ಮಾಲಿನ್ಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಇ)	ಬಂದಿದ್ದಲ್ಲಿ, ಖಾಲಿ ನಿವೇಶನಗಳ ನಿಜವಾದ ಮಾಲೀಕರಿಗೆ ನೋಟಿಸ್ ಜಾರಿ ಮಾಡಿ ಸ್ವಚ್ಛತೆಯಿಂದ ಇಟ್ಟುಕೊಳ್ಳುವಂತೆ ಸರ್ಕಾರದ ವತಿಯಿಂದ ನಿರ್ದೇಶನಗಳನ್ನು ನೀಡಲಾಗಿದೆಯೇ;	ಖಾಲಿ ನಿವೇಶನಗಳನ್ನು ಸ್ವಚ್ಛತೆಯಿಂದ ಇಟ್ಟುಕೊಳ್ಳುವಂತೆ ನಗರ ಪಾಲಿಕೆಯ ವತಿಯಿಂದ ನಿರ್ದೇಶನಗಳನ್ನು ಸುತ್ತೋಲೆ ಸಂಖ್ಯೆ: ಬಿಬಿಎಂಪಿ/ಜಂಟಿ ಆಯುಕ್ತರು (ಆರೋಗ್ಯ)/ ಪಿ.ಆರ್/ಎಫ್-852/15-16 ದಿನಾಂಕ: 27-07-2015 ರಂತೆ ನೀಡಲಾಗಿರುತ್ತದೆ.
ಈ)	ಈ ಸಂಬಂಧ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗಿದೆಯೇ; ಹಾಗಿದ್ದರೂ ಕಸ, ತ್ಯಾಜ್ಯ ಹಾಗೂ ಇನ್ನಿತರೆ ಸಮಸ್ಯೆಗಳನ್ನು ತಡೆಗಟ್ಟಲು ಸರ್ಕಾರದ ವತಿಯಿಂದ ತೆಗೆದುಕೊಂಡ ಕ್ರಮಗಳೇನು;	ಹೌದು, ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ. 1. ಮನೆ ಮನೆಯಿಂದ ನೇರವಾಗಿ ವಿಂಗಡಿಸಿದ ರೂಪದಲ್ಲಿ ತ್ಯಾಜ್ಯ ಸ್ವೀಕರಿಸಲಾಗುತ್ತಿದೆ. 2. ಸಂಪರ್ಕ ಕಾರ್ಯಕರ್ತೆಯರನ್ನು ಬಳಸಿಕೊಂಡು ತ್ಯಾಜ್ಯ ಉತ್ಪಾದಕರಿಗೆ, ತ್ಯಾಜ್ಯ ವಿಂಗಡಣೆ ಬಗ್ಗೆ ಸ್ಥಳದಲ್ಲೇ ಅರಿವು ಮೂಡಿಸಲಾಗುತ್ತಿದೆ. 3. ಬೀದಿ ನಾಟಕ ಮುಖಾಂತರ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕ್ರಮವಹಿಸಲಾಗುತ್ತಿದೆ. 4. ಸಮೂಹ ಮಾಧ್ಯಮಗಳಲ್ಲಿ ಸ್ವಚ್ಛತಾ ಗೀತೆಯನ್ನು ಬಿತ್ತರಿಸುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕ್ರಮವಹಿಸಲಾಗುತ್ತಿದೆ.

.2. . .

ಉ)	ಈ ರೀತಿಯ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಸರ್ಕಾರದ ವತಿಯಿಂದ ತೆಗೆದುಕೊಂಡ ಕ್ರಮಗಳೇನು?	ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 89 ಎಂಎನ್‌ವೈ 2019, ದಿನಾಂಕ: 13-09-2019 ರನ್ವಯ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಛೇರಿಗಳು, ನ್ಯಾಯಾಲಯಗಳು, ನಿಗಮ ಮಂಡಳಿಗಳು, ಪ್ರಾಧಿಕಾರಗಳು, ಆಯೋಗಗಳು, ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳ ಕಛೇರಿಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ /ಸಿಬ್ಬಂದಿಗಳು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಮೂರು (3) ಬಗೆಗಳಲ್ಲಿ ಸಂಗ್ರಹಿಸಿ ಹಸಿ ತ್ಯಾಜ್ಯವನ್ನು ತಮ್ಮ ಮನೆಯಲ್ಲಿ ಸಂಸ್ಕರಿಸಿ ಗೊಬ್ಬರಗೊಳಿಸಲು ಹಾಗೂ ಇತರೆ ತ್ಯಾಜ್ಯವನ್ನು ನೋಂದಾಯಿತ ತ್ಯಾಜ್ಯ ಮರುಬಳಕೆದಾರರಿಗೆ ನೀಡಲು ಕ್ರಮ ವಹಿಸುವಂತೆ ಹಾಗೂ ಸದರಿ ಅಧಿಕಾರಿ ಸಿಬ್ಬಂದಿಗಳು ಹಣ್ಣು ಮತ್ತು ತರಕಾರಿ ಖರೀದಿಯಲ್ಲಿ ಬಟ್ಟೆ / ನಾರು / ಉಣ್ಣೆ ಚೀಲಗಳನ್ನು ಬಳಸುವಂತೆ ಹಾಗೂ ಪ್ಲಾಸ್ಟಿಕ್ ಬಳಕೆ ನಿಷೇಧಿಸಲಾಗಿದೆ (ಅನುಬಂಧ-1 ರಲ್ಲಿ ನೀಡಲಾಗಿದೆ). ಪ್ರತಿ ವಾರ್ಡ್‌ಗೆ ಒಬ್ಬರಂತೆ ನಿವೃತ ಸೈನಿಕರನ್ನು ಮಾರ್ಷಲ್‌ಗಳನ್ನಾಗಿ ನೇಮಿಸಿ ತ್ಯಾಜ್ಯ ಬಿಸಾಡುವವರನ್ನು ಗುರುತಿಸಿ ದಂಡ ವಿಧಿಸಲಾಗುತ್ತಿದೆ. ತ್ಯಾಜ್ಯ ಸಂಸ್ಕರಣೆಗೆ ವಿಕೇಂದ್ರಿಕೃತ ಸಂಸ್ಕರಣ ಘಟಕಗಳನ್ನು ಸ್ಥಾಪಿಸಲಾಗಿದೆ. Solid Waste Management Byelaw ದಲ್ಲಿ 3-R ಅಂದರೆ ತ್ಯಾಜ್ಯ ಉತ್ಪತ್ತಿ ಕುಗ್ಗಿಸುವುದು (Reduce the Production of Waste), ಮರುಬಳಕೆ (Reuse) ಮತ್ತು ಮರು ಉಪಯೋಗಿಸುವಿಕೆ (Recycle) ಗೆ ಅವಕಾಶ ಕಲ್ಪಿಸಲಾಗಿದೆ.

ಸಂಖ್ಯೆ: ನಅಇ 88 ಎಂಎನ್‌ಜಿ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

P**T No. KARBIL/2001/47147

"ಅನುಬಂಧ-1"

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ-III	**ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೧೯, ೨೦೧೯ (ಭಾದ್ರಪದ ೨೮, ಶಕ ವರ್ಷ ೧೯೪೦)**	**ನಂ. ೭೭೯**
Part-III	***Bengaluru, Thursday, September 19, 2019 (Bhadrapada 28, Shaka Varsha 1940)***	***No. 779***

ನಗರಾಭಿವೃದ್ಧಿ ಸಚಿವಾಲಯ

ಸುತ್ತೋಲೆ

ಸಂಖ್ಯೆ: ನಅಇ/89/ಎಂಎನ್‌ವೈ/2019, ಬೆಂಗಳೂರು, ದಿನಾಂಕ: 13.09.2019

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಆಯಾ ಕಛೇರಿಗಳ ಆವರಣದಲ್ಲೇ ಸಂಸ್ಕರಿ ಸುವ, ಸದರಿ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ/ ಸಿಬ್ಬಂದಿಗಳು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಕಡ್ಡಾಯವಾಗಿ ತಮ್ಮ ಮನೆಯಲ್ಲಿಯೇ ಸಂಸ್ಕರಿಸುವ ಹಾಗೂ ಹಣ್ಣು ಮತ್ತು ತರಕಾರಿ ಇತ್ಯಾದಿಗಳ ಖರೀದಿಯಲ್ಲಿ ಬಟ್ಟೆ ಬ್ಯಾಗ್ ಬಳಸಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವ ಬಗ್ಗೆ.

ಉಲ್ಲೇಖ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪತ್ರ ಸಂಖ್ಯೆ: ಆ.ಆ.ಶಾ/ಪಿ.ಆರ್ (G)752/2019-20, ದಿನಾಂಕ: 01-07-2019.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಛೇರಿಗಳು, ನ್ಯಾಯಾಲಯಗಳು, ನಿಗಮ/ಮಂಡಳಿಗಳು, ಪ್ರಾಧಿಕಾರಗಳು, ಆಯೋಗಗಳು, ಇಲಾಖೆಗಳು ಸ್ವಾಯತ್ತ ಸಂಸ್ಥೆಗಳ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು, 03 ಬಗೆಗಳಲ್ಲಿ ಸಂಗ್ರಹಿಸಿ ಹಸಿತ್ಯಾಜ್ಯವನ್ನು ತಮ್ಮ ಮನೆಯಲ್ಲಿಯೇ ಸಂಸ್ಕರಿಸಿ ಗೊಬ್ಬರಗೊಳಿಸಬೇಕಾಗಿ ಹಾಗೂ ಇತರೆ ತ್ಯಾಜ್ಯವನ್ನು ನೋಂದಾಯಿತ ತ್ಯಾಜ್ಯ ಮರುಬಳಕೆದಾರರಿಗೆ ನೀಡುವಂತೆ ಕ್ರಮವಹಿಸುವ ಹಾಗೂ ಸದರಿ ಅಧಿಕಾರಿ/ಸಿಬ್ಬಂದಿಗಳು ಹಣ್ಣು ಮತ್ತು ತರಕಾರಿ ಇತ್ಯಾದಿಗಳ ಖರೀದಿಯಲ್ಲಿ ಬಟ್ಟೆ/ನಾರು/ಉಣ್ಣೆ ಚೀಲಗಳನ್ನು ಬಳಸುವಂತೆ ಹಾಗೂ ಪ್ಲಾಸ್ಟಿಕ್ ಬಳಕೆಗೆ ನಿಷೇಧವನ್ನು ಹೇರುವ ಕುರಿತಂತೆ ಸರ್ಕಾರವು ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿ ತಪ್ಪದೇ ಪಾಲಿಸುವಂತೆ ಸೂಚಿಸಿದೆ.

- ಎಲ್ಲಾ ಸರ್ಕಾರಿ ಕಛೇರಿಗಳು ತಮ್ಮಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು 03 ಬಗೆಗಳಲ್ಲಿ (ಹಸಿತ್ಯಾಜ್ಯ, ಒಣತ್ಯಾಜ್ಯ/ಮರುಬಳಕೆ ತ್ಯಾಜ್ಯ ಹಾಗೂ ನೈರ್ಮಲ್ಯ ತ್ಯಾಜ್ಯ)

ಕಡ್ಡಾಯವಾಗಿ ವಿಂಗಡಿಸಿ ಪ್ರತ್ಯೇಕವಾಗಿ ತ್ಯಾಜ್ಯವನ್ನು ಸಂಗ್ರಹಿಸಲು 03 ಬಗೆC ವಿವಿಧ ಬಣ್ಣದ ಬಿನ್‌ಗಳನ್ನು ಎಲ್ಲಾ ಕಛೇರಿಗಳಲ್ಲಿ ಇರಿಸಲು ಕ್ರಮವಹಿಸುವುದು.

- ಕಛೇರಿಯಲ್ಲಿ ಉತ್ಪತ್ತಿಯಾಗುವ ಹಸಿತ್ಯಾಜ್ಯ ಪ್ರಮಾಣಕ್ಕನುಸಾರವಾಗಿ ಕಛೇರಿಯ ಆವರಣದಲ್ಲೇ ಹಸಿತ್ಯಾಜ್ಯ ಸಂಸ್ಕರಣೆ ಮಾಡಲು ಅಗತ್ಯ ಕ್ರಮವಹಿಸುವುದು. ಒಣತ್ಯಾಜ್ಯ/ಮರುಬಳಕೆ ತ್ಯಾಜ್ಯ, ಎಲೆಕ್ಟ್ರಾನಿಕ್ ತ್ಯಾಜ್ಯವನ್ನು ನೋಂದಣಿ ಹೊಂದಿದ ಮರುಬಳಕೆದಾರರಿಗೆ ನೀಡಲು ಕ್ರಮವಹಿಸುವುದು, ಉಳಿದಂತೆ ನೈರ್ಮಲ್ಯ ತ್ಯಾಜ್ಯವನ್ನು ಪಾಲಿಕೆಯ ವಾಹನಗಳಿಗೆ ನೀಡಲು ಕ್ರಮವಹಿಸುವುದು.

- ಎಲ್ಲಾ ಕಛೇರಿಗಳಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಹಾಗೂ ಬಳಸಿ ಬಿಸಾಡುವಂತಹ ವಸ್ತುಗಳನ್ನು ಸಂಪೂರ್ಣವಾಗಿ ನಿಷೇಧಿಸುವುದು ಹಾಗೂ ಅಧಿಕಾರಿ/ಸಿಬ್ಬಂದಿ ವರ್ಗದವರು ಏಕ ಬಳಕೆ ಪ್ಲಾಸ್ಟಿಕ್ ಹಾಗೂ ಬಳಸಿ ಬಿಸಾಡುವಂತಹ ವಸ್ತುಗಳನ್ನು ಬಳಸದಂತೆ ನಿರ್ದೇಶಿಸುವುದು. ಎಲ್ಲಾ ಕಛೇರಿಗಳಲ್ಲಿ ಉತ್ಪತ್ತಿಯಾಗುವ ಪುನರ್‌ಬಳಕೆ ವಸ್ತುಗಳನ್ನು ಮರುಬಳಕೆ ಮಾಡಿಕೊಳ್ಳಲು ನೋಂದಾಯಿತ ಪುನರ್‌ಬಳಕೆದಾರರೊಂದಿಗೆ ನೋಂದಣಿ ಮಾಡಿಕೊಳ್ಳುವುದು.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುವ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಕಡ್ಡಾಯವಾಗಿ 03 ಬಗೆಗಳಲ್ಲಿ ವಿಂಗಡಿಸಬೇಕಾಗಿ ಹಾಗೂ ಹಸಿತ್ಯಾಜ್ಯವನ್ನು ತಮ್ಮ ಮನೆಗಳಲ್ಲಿಯೇ ಸಂಸ್ಕರಣೆ ಮಾಡಿ ಗೊಬ್ಬರಗೊಳಿಸುವಿಕೆಗೆ ಅಗತ್ಯ ಕ್ರಮವಹಿಸಲು ಸಂಬಂಧಪಟ್ಟ ಕಛೇರಿಗಳ ಇಲಾಖಾ ಮುಖ್ಯಸ್ಥರು ಕ್ರಮವಹಿಸುವುದು.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳು ಹಣ್ಣು ಮತ್ತು ತರಕಾರಿ ಇತ್ಯಾದಿಗಳ ಖರೀದಿಯಲ್ಲಿ ಬಟ್ಟೆ/ನಾರು/ಉಣ್ಣೆ ಚೀಲಗಳನ್ನು ಕಡ್ಡಾಯವಾಗಿ ಬಳಸಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವುದು.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಇಲಾಖಾ ಮುಖ್ಯಸ್ಥರು ತಮ್ಮ ಕಛೇರಿಯ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರು ಈ ಮೇಲ್ಕಂಡ ವಿಷಯಗಳನ್ನು ಪಾಲಿಸಿರುವ ಕುರಿತಂತೆ ಸರ್ಕಾರಕ್ಕೆ ಅನುಪಾಲನಾ ವರದಿಯನ್ನು ಸಲ್ಲಿಸುವುದು.

ಲಕ್ಷ್ಮೀಸಾಗರ್ .ಎನ್.ಕೆ
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 300